**ಎಲ್ಲಾದರೂ ಏನಾದರೂ ಅನುಮಾನ ಬಂದರೆ ನನ್ನ ಪಾತ್ರಗಳೇ ತಮ್ಮ ಬದುಕಿನ ಸತ್ಯಾಸತ್ಯತೆ ಕುರಿತು ಮಾತಾಡುತ್ತವೆ. ನನ್ನ ಕೃತಿಯಾದ್ದರಿಂದ ಅದರ ತಪ್ಪುಒಪ್ಪುಗಳ ಜವಾಬ್ದಾರಿ ನನ್ನದೇ. ತಪ್ಪು ಮಾಡುವುದು ತಪ್ಪಲ್ಲ. ತಪ್ಪು ಮಾಡುತ್ತಿದ್ದಾಗಲೂ ಅದೇ ಸರಿ ಅಂದುಕೊಳ್ಳುವುದು ತಪ್ಪು.**

ಹೇಗಿತ್ತು ಅನ್ನುವುದಕ್ಕಿಂತ ಅದರ ಅನುಭವ ಎಂತಹದು ಎನ್ನುವುದನ್ನು ಮನಗಾಣಿಸಬೇಕೆಂದುಕೊಂಡೆ.

'Beloved' ಕಾದಂಬರಿಯಲ್ಲಿ ಪೌಲ್ ಡಿ., "ಇದರ ಬಗ್ಗೆ ಎಂದೂ ಯಾರಿಗೂ ಹೇಳಿಲ್ಲ. ಕೆಲವೊಮ್ಮೆ ಇದರ ಬಗ್ಗೆ ಹಾಡಿದ್ದೇನೆ" ಎಂದು ಸೇಥೆಗೆ ಹೇಳುತ್ತಾನೆ. ಅವಳಿಗೆ ಗುಲಾಮರ ಮುಖವಾಡವನ್ನು ಹಾಕಿಕೊಳ್ಳುವುದು ಹೇಗಿರುತ್ತದೆ ಎಂದು ವಿವರಿಸಲು ಯತ್ನಿಸಿ ಕಡೆಗೆ ಅದನ್ನು ಹಾಕಿಕೊಂಡಾಗ ತನ್ನನ್ನು ನೋಡಿ ನಕ್ಕ ಕೋಳಿಯ ಬಗ್ಗೆ ಹೇಳುತ್ತಾನೆ. ಬಿಸಿಲಿನಲ್ಲಿ ಕೂರುವ ಕೋಳಿಗಿಂತ ತಾನು ಕಡೆಯಾಗಿ ಹೋದೆ ಎನ್ನುತ್ತಾನೆ.

◆ ನೀವು ಸೃಷ್ಟಿಸುವ ಪಾತ್ರ ಸಂಪೂರ್ಣವಾಗಿ ಕಾಲ್ಪನಿಕವೇ?

ನನ್ನ ಪರಿಚಿತರನ್ನು ಪಾತ್ರಗಳನ್ನಾಗಿ ಬಳಸುವುದಿಲ್ಲ. ಬಹುಶಃ 'The Bluest Eye'ನಲ್ಲಿ ಸ್ವಲ್ಪ ಮಟ್ಟಿಗೆ ನಮ್ಮಮ್ಮನ ಮಾತು, ವರ್ತನೆಯನ್ನು ಬಳಸಿದ್ದೆ. ಅದು ಬಿಟ್ಟರೆ, ಬೇರೆಲ್ಲೂ ಹಾಗೆ ಮಾಡಿಲ್ಲ. ಹಾಗೆ ಮಾಡಲು ನನ್ನ ಆತ್ಮಸಾಕ್ಷಿ ಒಪ್ಪುವುದಿಲ್ಲ.

◆ ಯಾಕೆ?

ಕಲಾವಿದರು ಅದರಲ್ಲೂ ಛಾಯಾಗ್ರಾಹಕರು ಸಕ್ಯೂಬಸ್(ಮಲಗಿರುವ ಗಂಡಿನೊಡನೆ ಸಂಭೋಗದಲ್ಲಿ ತೊಡಗುವ ಹೆಣ್ಣುರಾಕ್ಷಸಿ)ನಂತೆ ಎನ್ನುವ ಭಾವನೆ ಇದೆ. ಮತ್ತೊಬ್ಬರ ಬದುಕನ್ನು ತಮ್ಮ ಉದ್ದೇಶಗಳಿಗೆ ಬಳಸುತ್ತಾರೆಂದು ಹೀಗೆ ಹೇಳುತ್ತಾರೆ. ಹೀಗೆ ಮಾಡುವುದು ನೈತಿಕ ತೊಡಕುಗಳನ್ನು ಒಳಗೊಂಡಿದೆ.

ಕಾದಂಬರಿಯಲ್ಲಿ ನನ್ನದೇ ಕಾಲ್ಪನಿಕ ಪಾತ್ರಗಳನ್ನು ಸೃಷ್ಟಿಸುವುದು ಬಹಳ ರೋಮಾಂಚಕ ಸಂಗತಿ. ಅವರವರ ಬದುಕಿನ ಪೇಟೆಂಟ್ ಅವರವರದು. ಹಾಗಿರುವಾಗ, ಆ ಮತ್ತೊಬ್ಬರನ್ನು ಆಧರಿಸಿ ಪಾತ್ರ ಸೃಷ್ಟಿಸಿದರೆ ಕಾಪಿರೈಟ್ ಉಲ್ಲಂಘನೆಯಾದಂತಲ್ಲವೇ?

◆ ನಿಮ್ಮ ಪಾತ್ರಗಳು ನಿಮ್ಮ ನಿಯಂತ್ರಣ ಮೀರಿ ಹೋಗುತ್ತಿವೆ ಎಂದು ಅನ್ನಿಸಿದೆಯೇ?

ಅವು ನನ್ನ ನಿಯಂತ್ರಣದಲ್ಲೇ ಇರುತ್ತವೆ. ಅವುಗಳನ್ನು ಬಹಳ ಜತನದಿಂದ ಕಲ್ಪಿಸಿಕೊಂಡಿರುತ್ತೇನೆ. ಅವುಗಳ ಬಗೆಗಿನ ಪ್ರತಿಯೊಂದು ಸಂಗತಿ, ಉದಾಹರಣೆಗೆ ಅವು ಹೇಗೆ ಬೈತಲೆ ತೆಗೆಯುತ್ತವೆ ಎನ್ನುವುದು ಕೂಡ ಗೊತ್ತಿರುತ್ತದೆ. ಅದನ್ನು ಬರೆಯದೆ ಹೋಗಬಹುದು. ಅವು ದೆವ್ವಗಳಂತೆ. ಅವುಗಳ ಮನಸ್ಸಿನಲ್ಲಿ ಅವುಗಳ ಹೊರತು ಬೇರೇನೂ ಇರುವುದಿಲ್ಲ. ಅವುಗಳಿಗೆ ತಮ್ಮ ವಿನಃ ಬೇರಾವುದರಲ್ಲೂ ಆಸಕ್ತಿ ಇರುವುದಿಲ್ಲ. ಹಾಗಾಗಿ, ಅವುಗಳಿಗೆ ನಿಮ್ಮ ಪುಸ್ತಕ ಬರೆಯಲು ಬಿಡಬಾರದು. ಪಾತ್ರವೇ ಕಾದಂಬರಿಯ ಮೇಲೆ ಹಿಡಿತ ಸಾಧಿಸಿದಂತಹ ಪುಸ್ತಕಗಳನ್ನು ಓದಿದ್ದೇನೆ. ಪಾತ್ರಗಳು ಹಾಗೆ ಮುಂದುವರೆದಾಗ ಅದಕ್ಕೆ ತೆಪ್ಪಗಿರು, ನನ್ನ ಕೆಲಸ ನಾನು ಮಾಡಲು ಬಿಡು ಎಂದು ಹೇಳಿ ನೀವೇ ಬರೆಯಬೇಕು.